**ಓ ಎಸ್ ನಂಃ 11/2015**

**ಡಿ. ಡಬ್ಲ್ಯೂ ಃ 1**

**ದಿಃ 28.02.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎನ್ ಕೆ ಎನ್ ವಕೀಲರಿಂದಃ**

ಪಟೇಲ್ ಆಂಜನಪ್ಪ ಇವರಿಗೆ ದಾವಾ ಸ್ವತ್ತು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಅವರಿಗೆ ಇಬ್ಬರು ಹೆಂಡತಿಯರು ಮತ್ತು 6/7 ಜನ ಮಕ್ಕಳಿದ್ದರು. ನನಗೆ ಅವರ ಹೆಸರುಗಳನ್ನು ಹೇಳಲು ಬರುವುದಿಲ್ಲ. ನಮ್ಮ ತಂದೆ ಕ್ರಯಕ್ಕೆ ತೆಗೆದುಕೊಳ್ಳುವಾಗ ಪಟೇಲ್ ಆಂಜನಪ್ಪ ಇವರಿಗೆ ಎಷ್ಟು ಜನ ಹೆಂಡತಿಯರು ಮತ್ತು ಮಕ್ಕಳು ಎಂಬ ಬಗ್ಗೆ ವಂಶವೃಕ್ಷ ತೆಗೆದುಕೊಂಡಿದ್ದರೋ ಇಲ್ಲವೋ ಎಂದು ಗೊತ್ತಿಲ್ಲ. ನಾನು ಕ್ರಯಕ್ಕೆ ತೆಗೆದುಕೊಂಡಿರುವ ಸ್ವತ್ತಿಗೆ ವಾದಿಗಳು ಯಾವುದೆ ರೀತಿಯಲ್ಲಿ ಸಂಬಂಧ ಇಲ್ಲ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿದ್ದೇನೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಎಲ್ಲ ಸ್ವತ್ತುಗಳಿಗೆ ವಾದಿಗಳು ಸಂಬಂಧ ಇಲ್ಲ ಎಂದು ಬರೆಯಿಸಿದ್ದಾರೆ ಅದು ತಪ್ಪು. ನಾನು ನನ್ನ ಸ್ವತ್ತಿಗೆ ಮಾತ್ರ ಬರೆಯಿಸಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ಆ ಪ್ಯಾರಾದಲ್ಲಿ ಹೇಳಿರುವ ವಿಷಯಗಳು ನನ್ನ ಹೇಳಿಕೆ ಆಧಾರದ ಮೇಲೆ ಬರೆದಿದೆ.

ಆಂಜನಪ್ಪ ಇವರು ದಾವಾ ಸ್ವತ್ತುಗಳನ್ನು ಈ ಹಿಂದೆಯೇ ವಿಭಾಗ ಮಾಡಿಕೊಂಡಿದ್ದಾರೆ ಎಂದು ನನ್ನ ತಂದೆ ಹೇಳಿದ್ದರಿಂದ ನಾನು ಆ ರೀತಿ ಹೇಳುತ್ತಿದ್ದೇನೆ. ನಾವು ಕ್ರಯಕ್ಕೆ ತೆಗೆದುಕೂಂಡಿದ್ದೇವೆ ಎನ್ನುವ ಸ್ವತ್ತು ಸೇರಿದಂತೆ ಎಲ್ಲ ಸ್ವತ್ತುಗಳು ಮೃತ ಆಂಜನಪ್ಪ ಇವರ ಪಿತ್ರಾರ್ಜಿತ ಸ್ವತ್ತುಗಳೆಂದರೆ ಸರಿಯಲ್ಲ. ಆಂಜನಪ್ಪ ಇವರು ಭಾಗ ಆಗಿದ್ದರೆ ಎಂಬ ಬಗ್ಗೆ ಇದುವರೆವಿಗೂ ನಾನು ಯಾವುದೆ ದಾಖಲೆ ಕೊಟ್ಟಿಲ್ಲ. 1994 ರಲ್ಲಿ ಭಾಗ ಮಾಡಿಕೊಂಡಿದ್ದರೆ ಎಂಬ ಬಗ್ಗೆ ದಾಖಲೆ ನನ್ನ ಬಳಿ ಇದೆ. ಅದನ್ನು ಕೊಡುತ್ತೇನೆ. 1991 ರಲ್ಲಿ ಅಥವಾ 1994 ರಲ್ಲಿ ಆಂಜನಪ್ಪ ಹಾಗೂ ಅವರ ಕುಟುಂಬ ಸದಸ್ಯರು ದಾವಾ ಸ್ವತ್ತು ಹಾಗೂ ಇತರೇ ಸ್ವತ್ತುಗಳನ್ನು ಭಾಗ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಈ ವಿಷಯವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಆಂಜನಪ್ಪ ಇವರ ಪಿತ್ರಾರ್ಜಿತ ಸ್ವತ್ತುಗಳಲ್ಲ ಎಂದು ನಮ್ಮ ತಂದೆ ಹೇಳಿದ್ದರಿಂದ ಮತ್ತು ಅವರು ಕೊಟ್ಟ ದಾಖಲೆಗಳನ್ನು ನೋಡಿ ಹೇಳುತ್ತಿದ್ದೇನೆ.

ಓ ಎಸ್ 171/2008 ರಲ್ಲಿನ ಮೆಮೋವನ್ನು ಈ ಪ್ರಕರಣದಲ್ಲಿ ಇರುವ 2 ಪ್ರತಿವಾದಿಗಳು ಆ ಪ್ರಕರಣದಲ್ಲಿ ಇದ್ದರು ಎಂದು ತೋರಿಸುವುದಕ್ಕೆ ಮತ್ತು ಅದನ್ನು ವಜಾ ಮಾಡಿಸಿಕೊಂಡಿದ್ದಾರೆ

ಮತ್ತು ಅದನ್ನು ಹಿಂದಕ್ಕೆ ಪಡೆದಿದ್ದಾರೆ ಎಂದು ತೋರಿಸಲು ಮೆಮೋವನ್ನು ಹಾಜರುಪಡಿಸಿದ್ದೇನೆ. ಸದರಿ ಮೆಮೋ ಗೆ ವಾದಿಗಳು ಸಹಿ ಮಾಡಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಓ ಎಸ್ 171/2008 ರಲ್ಲೀನ ವಕಾಲತ್ ನ್ನು ಈ ಕೇಸ್ ನ reference ಗಾಗಿ ಕೊಟ್ಟಿದ್ದೇನೆ. ನಿ ಡಿ 6 ಕ್ಕಿಂತ ಹಿಂದಿನ ವಕಾಲತ್ ನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ನಿ ಡಿ 6 ಎನ್ ಒ ಸಿ ವಕಾಲತ್ ಇರುತ್ತದೆ ಎಂದರೆ ಸರಿ. ಆ ಕೇಸ್ ನ ಮೂಲ ವಕಾಲತ್ ನ್ನು ಹಾಜರುಪಡಿಸಲು ನನಗೆ ಯಾವುದೆ ತೊಂದರೆ ಇಲ್ಲ.

ಓ ಎಸ್ 590/2007 ರ ಮೆಮೋ ವನ್ನು ಈ ಕೇಸ್ ನಲ್ಲಿ reference ಗಾಗಿ ಹಾಕಿದ್ದೇನೆ. ಸದರಿ ನಿ ಡಿ 3 ರ ಮೆಮೋದಲ್ಲಿ ವಾದಿಗಳು ಸಹಿ ಮಾಡಿಲ್ಲ ಎಂದರೆ ಸರಿ. ಅದಕ್ಕೆ ಅವರ ವಕೀಲರು ಸಹಿ ಮಾಡಿರುತ್ತಾರೆ ಎಂದು ಸಾಕ್ಷಿ ಹೇಳುತ್ತಾರೆ. ಓ ಎಸ್ 101/2014 ಇದರ ತೀರ್ಪು ಏನಾಗಿದೆ ಎಂದು ಈಗ ನೆನಪಿಲ್ಲ ಅದನ್ನು ನೋಡಿದರೆ ಹೇಳುತ್ತೇನೆ. ಅದನ್ನು ನಾನು ಓದಿ ಪೂರ್ತಿ ತಿಳಿದುಕೊಂಡಿದ್ದೇನು. ಯಾವ ದಾಖಲೆ ಆಧಾರದ ಮೇಲೆ ಆ ದಾವೆ ವಜಾವಾಗಿದೆ ಎಂದು ನೆನಪಿಲ್ಲ. ನಿ ಡಿ 5 ರಲ್ಲಿ ವಾದಿಗಳ ಸಹಿ ಇಲ್ಲ ಎಂದರೆ ಸರಿ. ನಾನು ಹಾಜರುಪಡಿಸಿದ ದಾಖಲೆಗಳು ವಾದಿಗಳಿಗೆ ಸಂಬಂದಿಸಿದ್ದಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಕ್ರಯಕ್ಕೆ ತೆಗೆದುಕೊಳ್ಳುವಾಗ ಎಲ್ಲರ ವಿವರ ಇರುವ ವಂಶವೃಕ್ಷವನ್ನು ಪಡೆದಿಲ್ಲ. ಅದು ಮೋಸದ ದಾಖಲೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಗಳು ಮತ್ತು ಪ್ರತಿವಾದಿ 6 ರಿಂದ 8 ರವರನ್ನು ಹೊರತುಪಡಿಸಿ ಉಳಿದವರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳು ಎಂದರ ಸರಿಯಲ್ಲ. ನಾನು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ 12.12.1994 ರಂದು ನಾನು ಹೇಳಿದಂತೆ ಯಾವುದೆ ಮೌಖಿಕ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ಹಾಗೇನಾದರೂ ಆಗಿದ್ದಲ್ಲಿ ನಾನು ದಾಖಲೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಕ್ರಯಪತ್ರದಲ್ಲಿ 1994 ರಲ್ಲಿ ಮೌಖಿಕ ವಿಭಾಗ ಪತ್ರ ಆಗಿದ್ದನ್ನು ಬರೆದಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿಗಳ ಸಹಿ ಪಡೆಯದೆ ನಾವು ಒಂದು ಕ್ರಯಪತ್ರವನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಕ್ರಯಪತ್ರಕ್ಕೆ ಸಾಕ್ಷಿದಾರರು ಯಾರು ಇದ್ದರು ಎಂದು ನನಗೆ ನೆನಪಿಲ್ಲ. ಆ ಸಾಕ್ಷಿದಾರರು ಬದುಕಿದ್ದಾರೆ ಅವರನ್ನು ಸಾಕ್ಷಿ ಮಾಡಿಸುತ್ತೇನೆ. ಕಂದಾಯ ಅಧಿಕಾರಿಗಳ ಜೊತೆ ಸೇರಿಕೊಂಡು ರೆವಿನ್ಯೂ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಜಯರಾಮಯ್ಯ ಮತ್ತು ಆಂಜನಪ್ಪ ಇವರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವ ಯಾವುದೆ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.